ಕ್ಯಾರಕ್ಟರ್ಸ್' ಎಂದು ಗುರುತಿಸಿದ್ದಾರೆ) – ವಿದೂಷಕ, ಬೆರ್ಚಪ್ಪ, ಯಕ್ಷಿ ಇತ್ಯಾದಿಗಳಿದ್ದಾರೆ. ಶೈಲಿಯಲ್ಲಿ ದ್ವಿಪದಿ, ಪ್ರಾಸ, ಹಗುರ ಲಯ ಮತ್ತು ದೈನಂದಿನ ನುಡಿಗಟ್ಟುಗಳ ಬಳಕೆಗಳನ್ನು ಕಾಣಬಹುದು. ತಿರುಮಲೇಶ್ ತಮ್ಮ ಕವನಗಳಲ್ಲಿ ತೀರಾ ಗಂಭೀರರಾಗುವುದು ಕಡಿಮೆ. ವಿಷಯ ಪ್ರಸ್ತುತಿಯಲ್ಲಿ ವ್ಯಂಗ್ಯ, ತೆಳು ಹಾಸ್ಯ, ಪದ-ವಿನೋದ, ಆತ್ಮಾವಲೋಕನ, ಪುನರುಕ್ತಿಗಳ ನೆರವಿನೊಂದಿಗೆ ಅವರು ಒಂದು ವಿಶಿಷ್ಟ ಹಗುರ, ಸಂವಾದರೂಪದ ಕಾವ್ಯ ಶೈಲಿಯನ್ನು ಮತ್ತೆ ಮತ್ತೆ ಬಳಸುವುದಿದೆ. ಅದೇ ರೀತಿಯಲ್ಲಿ, ಸ್ವಂತ ಬದುಕಿನ ಸಂಗತಿಗಳನ್ನೂ ಬಳಸುತ್ತ, ಅನ್ಯ ಕವಿಗಳ ಪ್ರಸ್ತಾಪವನ್ನೂ ಮಾಡುತ್ತ, ಅನೇಕ ದೇಶಕಾಲಗಳ ವಸ್ತುಗಳನ್ನೂ ಹೆಣೆದುಕೊಂಡು ಆಳ ತಾತ್ವಿಕತೆಯನ್ನು ಧ್ವನಿಸುವ ಶಕ್ತಿಯೂ ಅವರ ಕವನಗಳಲ್ಲಿದೆ. ಮುಖ್ಯವಾಗಿ, ತಿರುಮಲೇಶ್ ಒಂದು ಬಗೆಯ ತೀವ್ರ ಜನಾನುರಾಗದ ಕವಿ. 'ಅರಬ್ಬೀ' ಸಂಕಲನದ ಈ ಸಾಲುಗಳನ್ನು ನೋಡಿ:

ಜನಕೂಟದಲ್ಲಿದ್ದೂ ನಾನು
ಒಂಟಿಯಾಗಿರಬಹುದು
ಒಂಟಿಯಾಗಿದ್ದೂ ಕಾಲದೇಶಗಳ
ಒಳಗೊಂಡಿರಬಹುದು
ಓ ನನ್ನ ಪ್ರಜ್ಞೆಯೇ ಸಾಕ್ಷಿಯಾಗಿರು
ಪ್ರತಿಯೊಂದು ರಕ್ತಬಿಂದುವಿಗೆ

ತಿರುಮಲೇಶ್ ಅವರ ಕವನಕ್ರಮದಲ್ಲಿ ಕೇಂದ್ರಪ್ರಜ್ಞೆ, ಸಾತತ್ಯ, ಸಮಗ್ರತೆಗಳಿಗೆ ಅಷ್ಟೇನೂ ಪ್ರಾಮುಖ್ಯವಿಲ್ಲ. ಹಾಗಾಗಿಯೇ, ಪಾಶ್ಚಿಮಾತ್ಯ ಇಮೇಜಿಸ್ಟ್ ಕಾವ್ಯಕ್ರಮಕ್ಕೆ ಬಹಳ ಸಮೀಪ ಇದ್ದರೂ, ತಿರುಮಲೇಶ್ ಭಿನ್ನರಾಗಿ ನಿಲ್ಲುತ್ತಾರೆ. ಇದರ ಅರ್ಥ ಅವರ ಎಲ್ಲ ಕವನಗಳೂ ಈ ಗುಣಗಳನ್ನು ಉಪೇಕ್ಷಿಸಿವೆ ಎಂದಲ್ಲ. ಬದಲಿಗೆ, ಓದುಗರನ್ನು ಪ್ರತಿಮೆ, ಮೂರ್ತ ಚಿತ್ರಗಳ ದಟ್ಟ ವರ್ಣನೆಯ ಮೂಲಕ ವಸ್ತು-ವಿಷಯ-ವಿಚಾರ 'ಅಕ್ಷಯ ಕಾವ್ಯ'ದ ಸಂಧರ್ಭದಲ್ಲಿ ಅಕ್ಷರಶಃ ಸತ್ಯ. ಪೂರ್ಣಪಾಠ ಓದಿ ಅಥವಾ ಬಿಡಿ ಬಿಡಿ ಸಾಲುಗಳನ್ನು ಓದಿ – ಯಾವುದೇ ಅಪೂರ್ಣತೆಯ ಭಾವ ಕಾಡುವುದಿಲ್ಲ. ಕಾವ್ಯದ ಓದಿನ ಹರುಷ, ಅದರ ತಿರುಳು ಒದಗಿಸುವ ತಾತ್ವಿಕತೆಯೊಂದಿಗಿನ ಮಂಥನದ ಆನಂದ ಇದ್ದೇ ಇದೆ. ಯಾವುದೇ ಕೇಂದ್ರವಸ್ತು ಅಥವಾ ಕ್ರಮಬದ್ಧತೆಯನ್ನು ಬಳಸದೇ ಸುದೀರ್ಘ ಕವನ ಬರೆಯುವ ಧೈರ್ಯವನ್ನು ತಿರುಮಲೇಶ್ ಅವರಂತಹ ಕಾವ್ಯದ ಕಡುಮೋಹಿ ಮತ್ತು ನಿರಂತರ ವಿದ್ಯಾರ್ಥಿ ಮಾತ್ರವೇ ಮಾಡಬಲ್ಲ ಎನಿಸುತ್ತದೆ. 'ಅಕ್ಷಯ ಕಾವ್ಯ' ಪ್ರಯೋಗದ ಮುಂದುವರಿಕೆಯಾಗಿ, ನಾಟಕೀಯ ಬಗೆಯಲ್ಲಿ ವಿಭಿನ್ನ ವಸ್ತು, ನೆನಪು, ಪರಿಸರ, ಪುರಾಣ, ನೆನಪು, ಪಾತ್ರ, ತಾತ್ವಿಕತೆ, ಕಥನಗಳನ್ನು ಹೆಣೆಯುತ್ತ ಭಸಭಸ ಹರಿವ ಹೊಳೆಯಂತೆ ಸಾಗುವ 'ಅವ್ಯಯ ಕಾವ್ಯ' ಕನ್ನಡ ಕಾವ್ಯಜಗತ್ತಿನಲ್ಲಿ ಅತ್ಯಂತ ವಿಶಿಷ್ಟ ರಚನೆ ಮತ್ತು ಬಹುಕಾಲದವರೆಗೆ ಕಾವ್ಯಾಸಕ್ತರು ಮತ್ತೆ ಮತ್ತೆ ಓದಿ ಮನನ ಮಾಡಲಿಚ್ಛಿಸುವ ಕೃತಿ ಎನ್ನಬಹುದು.

ದೇಶ, ಕಾಲ, ಭಾಷೆ-ಸಂಸ್ಕೃತಿಗಳ ನಡುವೆ ಭೇದವೇ ಇಲ್ಲದಂತೆ, ಎಲ್ಲ ತೊರೆಗಳಿಂದಲೂ ಹೀರಿಕೊಳ್ಳುವ, ಎಲ್ಲ ಬಗೆಯಲ್ಲಿಯೂ ವಿಸ್ತಾರಗೊಳ್ಳುತ್ತ ಸಾಗುವ ತಿರುಮಲೇಶ್ ಅವರ ಕಾವ್ಯಯಾನವನ್ನು ಒಟ್ಟಾರೆಯಾಗಿ ಅಭ್ಯಸಿಸಿದಾಗ ಮಾನವೀಯ ಪ್ರಜ್ಞೆಯ ಮೂಲಭೂತ ನೆಲೆಯಿಂದಲೇ ತನ್ನೆಲ್ಲ ಶೋಧನೆಯನ್ನೂ ನಡೆಸುವ ಹಟವನ್ನು ಹೊಂದಿರುವ ಅಪರೂಪದ ದಾರ್ಶನಿಕ ಕಾವ್ಯವಾಗಿ ಭಾಸವಾಗುತ್ತದೆ. ಕನ್ನಡದ ಮೂಲಕ ಪ್ರಪಂಚವನ್ನು ಧ್ಯಾನಿಸುವ, ಕನ್ನಡದ ಮೂಲಕ ವಿಶ್ವಾತ್ಮಕ ವಿಷಯಗಳನ್ನು ಶೋಧಿಸುವ, ಕನ್ನಡದ ಮೂಲಕ ವಿಶ್ವಸಾಹಿತ್ಯದ ಪೋಷಕಾಂಶಗಳನ್ನು ನಮ್ಮ ಸಂಸ್ಕೃತಿಯ ಜಾಯಮಾನಕ್ಕೆ ಒದಗಿಸುವ-ಒಗ್ಗಿಸುವ ಅವರ ಪ್ರಯೋಗಗಳು ಕನ್ನಡವನ್ನು ಶ್ರೀಮಂತಗೊಳಿಸಿವೆ. ಈ ಶ್ರೀಮಂತಿಕೆಯ ದಾರಿದೀಪವಾಗಿ ತಿರುಮಲೇಶ್ ಕನ್ನಡಿಗರಿಗೆ ಸದಾಕಾಲ ಒದಗುತ್ತ, ಸದಾಕಾಲ ಜೀವಂತವಾಗಿ ಇರುತ್ತಾರೆ.

ಅರ್ಥ ಮುಗಿಸಿದ ಕಾಗದದ ಕುರಿತು
ತಲ್ಲಣಿಸಬೇಡ
ಕೊನೆಯ ಕಾಗದವಲ್ಲ ಅದು ಕೊನೆಯಿರದ
ಕಾಗದವೆಂದು ತಿಳಿದರೆ ಸಾಕು
ಅದನ್ನೂ ಕೂಡ ಓದಲು ಒತ್ತಾಯಿಸುವ ಹಕ್ಕೂ
ನಿನಗಿಲ್ಲ.
ಮುಗಿಸದ ಕವಿತೆಯ ಹಾಗೆ ಅದು ತೆರೆದೇ
ಇರುತ್ತದೆ.
('ಅವ್ಯಯ ಕಾವ್ಯ') ●